# ಬಸವರಾಜ ಕಟ್ಟಿಮನೀಯವರ ಕಾದಂಬರಿಗಳಲ್ಲಿ ಸಮಕಾಲೀನ ರಾಜಕೀಯ ಚಿಂತನೆ

ಡಾ. ಶುಭಾ ಮರವಂತೆ

ಮುಖ್ಯಸ್ಥರು ಕನ್ನಡ ವಿಭಾಗ

ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಶಿವಮೊಗ್ಗ

ಬಸವರಾಜ ಕಟ್ಟೀಮನಿಯವರ ವ್ಯಕ್ತಿತ್ವವನ್ನು ರೂಪಿಸಿದ ಎರಡು ಪ್ರಮುಖ ಮಾಧ್ಯಮಗಳೆಂದರೆ ಒಂದು ಪ್ರಭಾವಿ ಪತ್ರಿಕೋದ್ಯಮ ಮತ್ತು ಸಕ್ರಿಯ ರಾಜಕಾರಣ. ಗಾಂಧಿವಾದ ಮತ್ತು ಸಮಾಜವಾದ ಎರಡನ್ನೂ ತಮ್ಮ ಬರಹದ ಶಕ್ತಿಯಾಗಿ ಕಂಡುಕೊಂಡ ಅವರು ಸಾಹಿತ್ಯವೂ ಸಮಾಜವನ್ನು ಬದಲಿಸುವ ಅಸ್ತ್ರವೆಂಬುದನ್ನು ಗುರುತಿಸಿಕೊಂಡವರು. ೧೯೪೨ರಿಂದಲೂ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ, ಜೈಲುವಾಸ ಅನುಭವಿಸಿ, ಕಾಂಗ್ರೆಸ್ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಅವರು ೧೯೬೮ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ನಾಮಕರಣಗೊಂಡರು. ಸ್ವಾತಂತ್ರ್ಯಾನಂತರ ಗಾಂಧಿ ಹಾಗೂ ನೆಹರೂ ಆದರ್ಶಗಳನ್ನು ಕಾಂಗ್ರೆಸ್ ನಲ್ಲಿ ಹುಡುಕಿ ಅದು ಅಲ್ಲಿ ಕಾಣದಾದಾಗ ಭ್ರಮನಿರಸನಗೊಂಡು 'ರೈತಕೂಲಿಕಾರರ' ಪಕ್ಷ ಸಂಘಟಿಸಿದ್ದು ಈಗ ಇತಿಹಾಸ. ಹನ್ನೆರಡು ಹದಿಮೂರು ವರ್ಷಗಳ ಪತ್ರಿಕೋದ್ಯದ ಸುದೀರ್ಘ ಅನುಭವ, ರೈತರು, ಗ್ರಾಮೀಣ ಜನ ಸಮುದಾಯದ ಬದುಕಿನ ಕಷ್ಟ ಕಾರ್ಪಣ್ಯ, ಆದರ್ಶ ಹಾಗೂ ವಾಸ್ತವವನ್ನು ಸರಿದೂಗಿಸಲಾಗದ ಅಸಹಾಯಕತೆ ಕಟ್ಟೀಮನಿಯವರನ್ನು ಬಹುವಾಗಿ ಕಾಡಿದೆ. ಇದೆ ಸಂದರ್ಭದಲ್ಲಿ ಬರೆದ **'ಬಲೆಯ ಬೀಸಿದರು'** ಕಾದಂಬರಿಯಲ್ಲಿ ಕಾಂಗ್ರೆಸ್ ರಾಜಕಾರಣದಿಂದ ಬೇಸತ್ತು ಸೋಷಿಯಲಿಸ್ಟ್ ಪಕ್ಷ ಸೇರ ಬಯಸುವ ಸದಾಶಿವನೆಂಬ ಯುವಕನ ಕಥೆಯಿದೆ. ಕ್ರಾಂತಿಕಾರಿಯೂ, ಕಾಂಗ್ರೆಸ್ ಪಕ್ಷದ ಅಭಿಮಾನಿಯೂ ಆಗಿದ್ದ ಸದಾಶಿವ ಅದರ ಪಕ್ಷರಾಜಕಾರಣ, ಪ್ರಗತಿ ವಿರೋಧಿನೀತಿಯಿಂದ ಜಿಗುಪ್ಸೆಗೆ ಒಳಗಾಗುತ್ತಾನೆ. ಕೊಲೆಗೂ ಇಡಾಗುತ್ತಾನೆ. ಸ್ವಕೇಂದ್ರಿತ ಆಸಕ್ತಿಯ ಚುನಾವಣೆಯ ಪ್ರಹಸನದಲ್ಲಿ ತತ್ವ ಆದರ್ಶಗಳು ಹೇಗೆ ಮಣ್ಣು ಪಾಲಾಯಿತು ಎನ್ನುವುದನ್ನು ಈ ಕಾದಂಬರಿಯಲ್ಲಿ ಲೇಖಕರು ಸ್ವತಹ ಸದಾಶಿವನೇ ಆಗಿ ಅನುಭವಿಸಿದ್ದಾರೆ. 'ಚಕ್ರವ್ಯೂಹ'ದಲ್ಲಿ ಶಂಕರ ಮತ್ತು ವನಮಾಲೆಯರೆಂಬ ಯುವಕ ಯುವತಿಯರು ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ಪ್ರಾಮಾಣಿಕವಾಗಿ ದುಡಿದರೂ ಯಾವುದೇ ಸ್ಥಾನ ಮಾನವಿಲ್ಲದೆ ನಿರಾಶೆಗೆ ಒಳಗಾಗುತ್ತಾರೆ. ನೈತಿಕ ಅಪವಾದಕ್ಕೂ ಗುರಿಯಾಗುತ್ತಾರೆ. ಭ್ರಷ್ಟ ಸ್ವಾರ್ಥಪರ ಹಿತಾಸಕ್ತಿ ಬೆಂಬಲಿಸಿದರೆ ಮಾತ್ರ ಉಳಿಗಾಲ, ಇಲ್ಲದಿದ್ದರೆ ಇಲ್ಲ ಎಂಬ ಸತ್ಯ ಸಂಗತಿ ಅರಿವಾಗುತ್ತದೆ. ಹೊರಬರಲಾರದ ಈ ರಾಜಕಾರಣದ ಸ್ವರೂಪವನ್ನು ಚಕ್ರವ್ಯೂಹಕ್ಕೆ ಹೋಲಿಸಿದ್ದಾರೆ. ಲಿಂಗಣ್ಣನಂತಹ ತತ್ವನಿಷ್ಠ ಪ್ರಾಮಾಣಿಕ ರಾಜಕಾರಣಿಯ ಅಧಃಪತನವನ್ನು ಚಿತ್ರಿಸುವ ಅವರ 'ಮಾಜಿ ಮಂತ್ರಿ' ಕೂಡ ರಾಜಕೀಯ ಪ್ರಧಾನ ಕಾದಂಬರಿ.

ಕಟ್ಟೀಮನಿಯವರ **'ಬೆಂಗಳೂರಿಗೊಂದು ಟೀಕೀಟು'** ಕಾದಂಬರಿಯನ್ನು ಕೂಡ ಅವರ ಇತರ ರಾಜಕೀಯ ಕಾದಂಬರಿಗಳಂತೆ ತೀವ್ರವಾದ ರಾಜಕೀಯ ಪ್ರಜ್ಞೆಯ ಸ್ವರೂಪದಲ್ಲಿ ಗುರುತಿಸುವ ಅಗತ್ಯವಿದೆ. ನೆಹರೂ ಆಡಳಿತ ವೈಪಲ್ಯವು ಭ್ರಷ್ಟರ ನೆರವಿಯಲ್ಲಿ ಹೇಗೆ ಕಂಡು ಬಂತು ಎನ್ನುವ ವಿಷಾದ – ವಿಚಾರ ಕಾದಂಬರಿಯಲ್ಲಿ ಅಡಕಗೊಂಡಿದೆ. ಗಾಂಧಿಯವರ ಗ್ರಾಮಸ್ವರಾಜ್ಯ, ಗ್ರಾಮಗಳ ಉದ್ಧಾರದಂತಹ ಪರಿಕಲ್ಪನೆಗಳು ಕ್ರಮೇಣ ಹುಸಿಯಾಗಿ ಹೇಗೆ ನಗರ ಕೇಂದ್ರಿತವಾಗುತ್ತಾ ಬಂತು ಎನ್ನುವುದನ್ನು ಕಾದಂಬರಿಯ ಶೀರ್ಷಿಕೆ ವಿಷದಪಡಿಸುತ್ತದೆ. 'ಬೆಂಗಳೂರು' ಹೇಗೆ ನಮ್ಮೆಲ್ಲ ರಾಜಕೀಯ ಚಟುವಟಿಕೆಗಳ ಮೂಲಸ್ಥಾನವಾಯಿತು ಎನ್ನುವ ಸೂಕ್ಷ್ಮತೆಯೂ ಇಲ್ಲಿದೆ. ಇದರ ಮುಂದುವರಿಕೆಯಾಗಿ ರೆಸಾರ್ಟ್ ರಾಜಕಾರಣ ಬೆಳೆದಿರುವುದು ಈಗ ಇತಿಹಾಸ. ಕಾದಂಬರಿಯಲ್ಲಿ 'ರಾಜಕಾರಣ' ಎಂಬ ಪದ ಬೆಳೆದಿರುವುದೆ ಒಂದು 'ಐಡೆಂಟಿಯ' ಪ್ರಶ್ನೆಯಾಗಿ. ಪ್ರಜಾಪ್ರಭುತ್ವದ ಮೌಲ್ಯಗಳು ಅನಾದರಣೆಗೆ ಗುರಿಯಾಗುತ್ತಿರುವ ಪ್ರಸ್ತುತ ಸಾಂಸ್ಕೃತಿಕ ಸನ್ನಿವೇಶದಲ್ಲಿ ಕಟ್ಟೀಮನಿಯವರ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸುವುದು ಅತ್ಯಗತ್ಯ. ಅಧಿಕಾರ ರಾಜಕಾರಣ, ಹಣಬಲ ಮತ್ತು

ಸ್ಥಾನಬಲದ ಹಪಾಹಪಿಯನ್ನು ಮೀರಿ ರಾಜಕೀಯ ಎನ್ನುವುದು ಸಾಧ್ಯವೇ ಇಲ್ಲ ಎಂಬ ಪ್ರಭುತ್ವವಾದಿ ಮನೋಸ್ಥಿತಿಯೊಂದು ದೇಶವನ್ನು ಆಕ್ರಮಿಸಿಕೊಳ್ಳುತ್ತಿರುವ ಇಂದಿನ ಸ್ಥಿತಿಯಲ್ಲಿ ಪ್ರತಿರೋಧದ ಧ್ವನಿ ಆಳುವ ವರ್ಗವನ್ನು ಎಂತಹ ಸಂದರ್ಭದಲ್ಲೂ ಅಲುಗಾಡಿಸುವುದೆ ಇಲ್ಲ ಎಂಬ ಸತ್ಯವನ್ನೂ ಈ ಕಾದಂಬರಿ ಧ್ವನಿಸುತ್ತದೆ. ಪ್ರಭುತ್ವದ ಬೂಟಾಟಿಕೆಯನ್ನು ಬಯಲು ಮಾಡುವ ಚಳುವಳಿ, ಕ್ರಾಂತಿ ಎಂಬುದು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಸಮಾಜ ಕಳಾಹೀನವಾಗಿರುವಾಗ ಬದಲಾವಣೆ ಎಲ್ಲಿಂದ ಸಾಧ್ಯ? ಎಂಬ ಮೂಲಭೂತ ಪ್ರಶ್ನೆಯನ್ನು ಈ ಕಾದಂಬರಿ ಕೈಗೆತ್ತಿಕೊಳ್ಳುತ್ತದೆ. ಹಣ, ಹೆಣ್ಣು ಅಧಿಕಾರವೆ ದಾಳವಾಗಿರುವಾಗ ಆದರ್ಶ ಗಾಳಿಗೆ ತೂರಲ್ಪಡುತ್ತದೆ. ಚಳುವಳಿಯ ಕಾವು ತುಂಬಿಕೊಂಡ ಜನ ಸಮುದಾಯ ಅಧಿಕಾರದ ಗುಂಗು ಹಿಡಿಕೊಳ್ಳುವ ಮನಸ್ಥಿತಿಗೆ ಬದಲಾಗಿರುವುದು ಗಾಂಧಿಯೋತ್ತರ ಭಾರತದ ಪ್ರಹಸನವಾಗಿ ಕಾಣುತ್ತದೆ.

ಕಾದಂಬರಿಯ ನಾಯಕ ಸದಾಶಿವನ ಆತ್ಮವೃತ್ತಾಂತದ ತಂತ್ರವಾಗಿ ನಿರೂಪಿಸಲ್ಪಡುವ ಈ ಕಥನಶಿಲ್ಪ ವಸಾಹತೋತ್ತರ ಭಾರತದ ರಾಜಕೀಯ ಸ್ಥಿತಿಯ ವಿಡಂಬನೆಯಂತಿದೆ. ಕಾದಂಬರಿ ಆರಂಭವಾಗುವುದೆ ಕಳ್ಳಭಟ್ಟಿ ಸರಾಯಿ ಅಂಗಡಿಯ ಮರಿಯನ ಸರಾಯಿ ಅಂಗಡಿಯ ಪರಿಚಯದಿಂದ. ಅದೇ ಉದ್ಯೋಗದ ಮೂಲಕ ಸಮಾಜದಲ್ಲಿ ಅವನೊಬ್ಬ ಘನತೆಯ ಸ್ಥಾನ ಪಡೆದುಕೊಂಡು ಮರಿಯಪ್ಪ, ಮರಯಪ್ಪ ಸೆಟ್ಟಿ, ಮರಿಯಣ್ಣನಾಗಿದ್ದಾನೆ. ಕಾದಂಬರಿಯ ನಾಯಕ ಮರಿಯನ ಅಂಗಡಿಯಲ್ಲಿ ಸೆರೆ ಕುಡಿದು ಯಾವ ತತ್ವ, ಧ್ಯೇಯ, ಆದರ್ಶಗಳಿಗೆ ಮರುಳಾಗದೆ ವಾಸ್ತವದ ಪ್ರಜ್ಞೆಯಲ್ಲಿ ಸಮಾಜವನ್ನು ಗ್ರಹಿಸುವ ಒಬ್ಬ ತೀಕ್ಷ್ಣ ವಿಚಕ್ಷಕನಾಗಿದ್ದಾನೆ. ಅವನೇ ತನ್ನ ಪ್ರೇಯಸಿ ರಾಧೆಯ ಬಳಿ ಹೇಳಿಕೊಂಡ ಹಾಗೆ, " ನಾನೊಬ್ಬ ಒಂದನೆ ನಂಬರಿನ ಉಡಾಳ, ನಿರುಪಯೋಗಿ, ಆಲಸಿ, ಮೈಗಳ್ಳ". ಅಧಿಕಾರಶಾಹಿಯ ಮೋಸ ಜಾಲದಿಂದ ಇದ್ದ ಉದ್ಯೋಗವನ್ನೂ ಕಳೆದುಕೊಂಡು, ಸರಾಯಿ ಕುಡಿಯುವ ಕೆಟ್ಟಚಟವನ್ನು ಇತ್ತೀಚೆಗಷ್ಟೇ ರೂಢಿಸಿಕೊಂಡಿದ್ದಾನೆ. ಪ್ರತಿಕಾರಕ್ಕಾಗಿ ಕಾದುಕುಳಿತ ಗಾಯಗೊಂಡ ಹುಲಿ ಅವನು. ಈ ನಾಯಕನಿಗೆ ಆದರ್ಶವಾದಿ ಭ್ರಮೆಗಳಿಲ್ಲ. ಸಮಾಜವನ್ನು ಸುಧಾರಣೆ ಮಾಡಬೇಕೆಂಬ ಹಠ ಛಲವಿಲ್ಲ. ಅವನು ವ್ಯವಸ್ಥೆಯು ಭ್ರಷ್ಟವಾಗುವುದಕ್ಕೆ ಅವಕಾಶವಾದಿ ರಾಜಕಾರಣವೆ ಕಾರಣವೆಂದು ಭಾವಿಸಿ ಅದಕ್ಕೆ ಪ್ರತಿ ತಂತ್ರ ಹೂಡುವುದೊಂದೆ ಪರಿಹಾರವೆಂದು ನಂಬುವ ಗುಪ್ತ ಕಾರ್ಯಸಾಧಕ. ಬಿಳಿಯಟೋಪಿ ಭ್ರಷ್ಟತೆಯ ಸಂಕೇತವೆಂದು ಭಾವಿಸುವ ಸದಾಶಿವನಿಗೆ ಕಾಂಗ್ರೆಸ್ ನಾಯಕರು 'ಪುಢಾರಿ'ಗಳಾಗಿ ಕಾಣುತ್ತಾರೆ. ಕಾಂಗ್ರೆಸ್ ಎಂಬ ಬಿಲದೊಳಗೆ ಎಂತಹ ದುಷ್ಟ, ಭ್ರಷ್ಟ ಸಮಯ ಸಾಧಕರಿದ್ದಾರೆ ಎನ್ನುವುದನ್ನು ಎಲ್ಲರಿಗೂ ತೆರೆದು ತೋರಿಸುವುದು ನಾಯಕ ಸದಾಶಿವನ ಮೂಲ ಉದ್ದೇಶ. ಆದರೆ ಅಂತಹ ಪ್ರಯತ್ನಗಳಲ್ಲಿ ಅವನು ಯಶಸ್ವಿಯಾಗುತ್ತಾನೆಯೇ ಎನ್ನುವುದು ಇಲ್ಲಿಯ ಕುತೂಹಲದ ಪ್ರಶ್ನೆ.

ವಿದ್ಯಾವಂತನೂ ವೈಚಾರಿಕ ಪ್ರಜ್ಞೆಯುಳ್ಳವನೂ ಆದ ಸದಾಶಿವನಿಗೊಂದು ದುರಂತ ಬದುಕಿನ ಕಥೆಯಿದೆ. ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ ದುಡಿಯುತ್ತಿದ್ದ ಸದಾಶಿವ ಹತ್ತು ಸಾವಿರ ರೂಪಾಯಿ ಅಫರಾತಫರು ಮಾಡಿದ ಆರೋಪದ ಮೇಲೆ ಕೆಲಸ ಕಳೆದುಕೊಂಡ. ವಿಚಾರಣೆಯಲ್ಲಿ ಮನೆ ಹೊಲವನ್ನೂ ಲಿಲಾವಿಗಿಟ್ಟು ಕಳೆದುಕೊಂಡದ್ದಲ್ಲದೆ ಇದ್ದೊಬ್ಬ ತಾಯಿ ಕೂಡ ಈ ಆಘಾತವನ್ನು ತಡೆಯಲಾಗದೆ ಪ್ರಾಣಬಿಟ್ಟಳು. ಇದಕ್ಕೆಲ್ಲ ಕಾರಣ ಹಿರಿಯ ಕಾಂಗ್ರೆಸ್ ಲೀಡರ್, ಲಕ್ಷಾಧೀಶ ವ್ಯಾಪಾರಿ ಬಸೆಟ್ಟಿ ಎಂಬವನು. ಅವನ ಪಿತೂರಿಯಿಂದಲೇ ಉದ್ಯೋಗ ಭ್ರಷ್ಟನಾದ ಸದಾಶಿವನಿಗೆ ಬಸೆಟ್ಟಿಯನ್ನು ನೋಡಿದರೆ ಎಲ್ಲಿಲ್ಲದ ಆಕ್ರೋಶ. ಹಣ ಮತ್ತು ಅಧಿಕಾರದ ಮದದಿಂದ ಮೆರೆಯುವ ಬಸೆಟ್ಟಿಗೆ ಮತ್ತೆ ಕಾಂಗ್ರೆಸ್ ಚುನಾವಣೆಯಲ್ಲಿ ಟಿಕೀಟು ಸಿಗದ ಹಾಗೆ ಮಾಡುವುದು ಸದಾಶಿವನ ಗುರಿ. ಬಸೆಟ್ಟಿಯೊಡನೆ ಮೊದಲಿನಿಂದಲೂ ಸೇಡಿನ ರಾಜಕಾರಣವನ್ನು ಸಾಧಿಸಿಕೊಂಡು ಬಂದ ರುದ್ರಗೌಡ, ಪಕ್ಷರಾಜಕಾರಣ ಹಾಗೂ ಜಾತಿ ರಾಜಕಾರಣದ ಸಹಾಯದಿಂದ ಹೇಗಾದರೂ ಮಾಡಿ ಬಸೆಟ್ಟಿಯನ್ನು ನಿರ್ನಾಮ ಮಾಡಬೇಕೆಂಬ ಉದ್ದೇಶದಿಂದ ಯುವಕ ಸದಾಶಿವನನ್ನು ಬಳಸಿಕೊಳ್ಳುತ್ತಾನೆ. ಸಾಧ್ಯವಾದಷ್ಟು ಬಸೆಟ್ಟಿಯ ಅವ್ಯವಹಾರಗಳ ಬಗ್ಗೆ ಸೂಕ್ತ ಪುರಾವೆಗಳನ್ನು ಜೋಡಿಸಿ ಪಕ್ಷದ ವರಿಷ್ಠರಾದ ಸದಾಸ್ಮಿತಪ್ಪನವರಿಗೆ ವರದಿ ಮಾಡುವುದು. ಇದರ ಮೂಲಕ ರುದ್ರಗೌಡರಿಗೆ ೧೯೬೦-೬೧ ರ ಮೂರನೇ ಮಹಾ

ಚುನಾವಣೆಯಲ್ಲಿ ಟೀಕೀಟು ದೊರಕುವ ಹಾಗೆ ಮಾಡುವುದು ಮತ್ತು ಬಸೆಟ್ಟಿಯನ್ನು ಕಾಂಗ್ರೆಸ್ ರಾಜಕಾರಣದಿಂದಲೇ ಉಚ್ಚಾಟನೆ ಮಾಡಿಸುವುದು ಸದಾಶಿವನ ಪ್ಲಾನ್. ಇದಕ್ಕೆ ಜೊತೆಯಾದವನು ರುದ್ರಗೌಡ.

ನೆಹರೂ ವ್ಯಕ್ತಿತ್ವ ನೆನಪಿಸುವಂತಹ ಸದಾಸ್ಮಿತಪ್ಪ ಎಲ್ಲಾ ದೃಷ್ಟಿಯಿಂದ ಸಮರ್ಥನಾಯಕ. ಕೀಳುಮಟ್ಟದ ರಾಜಕಾರಣವನ್ನು ಸಹಿಸದ ಅವರು ಬಸೆಟ್ಟಿಯಂತಹ ಮರಿ ಪುಢಾರಿಯನ್ನು ಎಂದೂ ಎತ್ತಿ ಹಿಡಿಯಲಾರರು ಎನ್ನುವುದು ರುದ್ರಗೌಡ ಹಾಗೂ ಸದಾಶಿವನ ನಂಬಿಕೆ. ಸದಾಶಿವ ರುದ್ರಗೌಡನ ಪರವಾಗಿ ಬಸೆಟ್ಟಿಯ ವಿರುದ್ಧ ಸಂಚು ಹೊಸೆಯಲು ಸಿದ್ಧನಾಗುತ್ತಾನೆ. ಗಾಂಧಿತತ್ವದಲ್ಲಿ ಅಚಲ ನಂಬಿಕೆ ಇರುವ ಸದಾಶಿವನಿಗೆ, " ನಾನೆಷ್ಟೇ ಪತನ ಹೊಂದಿದರೂ ಈ ಖಾದಿಯನ್ನು ಬಿಡಲಿಕ್ಕಾಗುವುದಿಲ್ಲ ನೋಡು" ಎಂದು ರಾಧೆಗೆ ಹೇಳುವಾಗ ಖಾದಿ ಹೆಸರಿನಲ್ಲಿ ಕುರುಡು ದೇಶಭಕ್ತರು ನಡೆಸುವ ಕುತಂತ್ರದ ಅರಿವೂ ಅವನಿಗಿದೆ. ಸೋಗಲಾಡಿ ದೇಶಭಕ್ತರ ಬಣ್ಣ ಬದಲಾಗುವ ಹಾಗೆ ಖಾದಿಯೂ ಬಣ್ಣ ಕಳೆದುಕೊಳ್ಳುತ್ತಿರುವುದನ್ನು ರಾಧೆ ವಿಡಂಬಿಸುತ್ತಾಳೆ.

ಸದಾಶಿವನಿಗೆ ಕಾಂಗ್ರೆಸ್ ಈಗ ಮೊದಲಿನಂತಿಲ್ಲವೆನ್ನಿಸಿದೆ. ಹೈಸ್ಕೂಲ್ ಓದುವಾಗಿಂದಲೂ ಕಛೇರಿಗೆ ಹೋಗಿ ಬರುತ್ತಿದ್ದ ಅವನಿಗೆ ಈಗ ಅಲ್ಲಿ ಎಗ್ಗಿಲ್ಲದೆ ಮೆರೆಯುತ್ತಿರುವ ಮಲ್ಲಿಕಾರ್ಜುನಪ್ಪ, ಮಾಲಾದೇವಿ ಮೊದಲಾದವರು ಟಿಕೇಟಿಗಾಗಿ ಹಪಹಪಿಸುವುದನ್ನು ಕಂಡು ಪಕ್ಷದ ಬಗ್ಗೆ ತಿರಸ್ಕಾರ ಮೂಡುತ್ತದೆ. ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತನಾದ ಮುದ್ದಣ್ಣ ಹೇಳುವ ಹಾಗೆ " ಇವರಿಗೋ ರೀತಿಯಿಲ್ಲ, ನೀತಿಯಿಲ್ಲ. ನಮ್ಮಂತಹ ಬಡವರನ್ನ ಮುರಿದು ಹಣಾಗಳಿಸಿ ಶ್ರೀಮಂತರಾಗ್ತಾರಾ, ಸಂಘ ಸಂಸ್ಥೆಗಳನ್ನು ಬ್ಯಾಂಕುಗಳನ್ನು ಮುಳುಗಿಸಿ ಲಕ್ಷಾಧೀಶರಾಗ್ತಾರಾ. ದೊಡ್ಡ ದೊಡ್ಡ ಮನೆ ಕಟ್ಟಿಸ್ತಾರಾ, ಬಂಗಲೆ ಕಟ್ಟಿಸ್ತಾರಾ, ಕಾರು ಕೊಳ್ಳುತ್ತಾರಾ. ಅದರಾಗ ಮಾಲಾನಂತಹ ಸೂಳೆರನ್ನ ಕೂಡ್ರಿಸಿಕೊಂಡು ಚಕ್ಕಂದ ಹೊಡೀತಾರಾ. ಮತ್ತ ಗಾಂಧಿ ಶಿಷ್ಯರಂತೆ! ಕಾಂಗ್ರೆಸ್ ಮುಖಂಡರಂತೆ! ಇಂಥಾ ಢೋಂಗಿ ಮಂದಿ ಹೆಚ್ಚಾಗಿಯೇ ಕಾಂಗ್ರೆಸ್ ಕೆಟ್ಟಿತು". ಮೊನಚು ಮಾತುಗಳಿಂದ ಟೀಕಿಸುವ ಕಾದಂಬರಿಕಾರರ ದೃಷ್ಟಿ ಪಲಾಯನವಾದವಲ್ಲ; ಪ್ರಜಾಪ್ರಭುತ್ವದ ಉಳಿವಿಗೆ ನಡೆಸುವ ನಿರಂತರ ಪ್ರಯತ್ನವೆಂಬಂತೆ ಕಂಡುಬರುತ್ತದೆ. ಮಾಡಿ ಮಡಿದವರು ಕಾದಂಬರಿಯಲ್ಲಿ ಕಾಣುವ ವಿಶ್ವನಾಥ ಮತ್ತು ಹೇಮಾ ಅವರ ಆದರ್ಶಕ್ಕೂ ಬೆಂಗಳೂರಿಗೊಂದು ಟಿಕೀಟು ಕಾದಂಬರಿಯ ಮಾಲಾ ಮತ್ತು ಮಲ್ಲಿಕಾರ್ಜುನಪ್ಪನಿಗೂ ಇರುವ ಸ್ವಾರ್ಥ ಕಾಮಲಾಲಸೆಗೂ ಇರುವ ಅಂತರವನ್ನು ಗುರುತಿಸಬೇಕು. ಅಲ್ಲಿ ಗುರಿಸಾಧನೆಗಾಗಿ ದೈಹಿಕ ಆಕರ್ಷಣೆಗಳನ್ನು ಮೀರಬೇನ್ನುವ ಹೇಮಾ, ದೇಹ ಮಾರಿಕೊಂಡರೂ ಅಧಿಕಾರ ಹಿಡಿಯಬೇಕೆನ್ನುವ ಮಾಲಾ ಎರಡು ವಿಭಿನ್ನ ಉದಾಹರಣೆಗಳಾಗಿ ಕಾಣುತ್ತಾರೆ.

ಬಸೆಟ್ಟಿಯ ಬಗ್ಗೆ ಗುಪ್ತ ಮಾಹಿತಿ ಸಂಗ್ರಹಿಸಿಕೊಂಡ ಸದಾಶಿವ ಅವನ ಮೊದಲನೆ ಹೆಂಡತಿ ಕಾಮಾಕ್ಷಿಯನ್ನು ಭೇಟಿಯಾಗಿ ಅವಳ ಪ್ರೇಮವನ್ನು ಸಂಪಾದಿಸುತ್ತಾನೆ. ಗಂಡನಿಂದ ಪರಿತ್ಯಕ್ತಳಾಗಿ ಅವನ ಸರ್ಪಗಾವಲಿನಲ್ಲಿರುವ ಕಾಮಾಕ್ಷಿ ನಿಜಕ್ಕೂ ನತದೃಷ್ಟೆ. ಸುಂದರಿಯಾದ ಅವಳನ್ನು ಬಿಟ್ಟು ಎರಡನೆ ಮದುವೆಯಾದ ಬಸೆಟ್ಟಿಯ ಕ್ರೌರ್ಯದ ಮುಖವನ್ನು ಸದಾಶಿವ ಕಲೆ ಹಾಕುತ್ತಾನೆ. 'ಕ್ರಾಂತಿ' ಪತ್ರಿಕೆಯ ಸಂಪಾದಕನಾದ ಕಾಗವಾಡನಂತಹ ಪತ್ರಕರ್ತನ ಮೂಲಕ ಬಸೆಟ್ಟಿಯ ವ್ಯಕ್ತಿತ್ವವನ್ನು ಹರಾಜು ಹಾಕಿಸುವ ಕೆಲಸವೂ ನಡೆಯಿತು. ಇದಕ್ಕೆ ಪ್ರತಿಯಾಗಿ ತುತೂರಿ ಪತ್ರಿಕೆಯಲ್ಲಿ ಬಸೆಟ್ಟಿಯ ಮೇಲೆ ಮಾಡಿದ ಆರೋಪಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಅದರ ಸಂಪಾದಕ ಪಾಟೀಲನೂ ಬರೆಯುತ್ತಾನೆ. ಪತ್ರಿಕೋದ್ಯಮದಲ್ಲೂ ಪಳಗಿದ್ದ ಕಟ್ಟೀಮನಿಯವರಿಗೆ ಅಧಿಕಾರ ರಾಜಕಾರಣವು ಪತ್ರಿಕೋದ್ಯಮವನ್ನು ಹೇಗೆ ತನ್ನ ಮುಖವಾಣಿಯಾಗಿ ಬಳಸಿಕೊಳ್ಳುತ್ತದೆ ಎನ್ನುವುದರ ಅರಿವು ಸ್ಪಷ್ಟವಾಗಿದೆ. ಆದರೆ ಬಸೆಟ್ಟಿಯ ಬಗ್ಗೆ ಸದಾಶಿವ ರುದ್ರಗೌಡರು ಮಾಡಿದ ಯಾವ ಕಾರ್ಯತಂತ್ರಗಳೂ ಕೆಲಸಕ್ಕೆ ಬರುವುದಿಲ್ಲ. ಬದಲಿಗೆ ಬಸೆಟ್ಟಿಯ ಜೊತೆಗೆ ಅವನ ಎರಡನೆಯ ಹೆಂಡತಿ ಪ್ರಭಾವತಿಗೂ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೀಟು ದೊರೆಯುವ ಸೂಚನೆ ದೊರೆಯಿತು. ಸದಾಸ್ಮಿತಪ್ಪನವರ ಆಗಮನ, ಟಿಕೀಟು ಪಡೆಯುವ ಮಸಲತ್ತು, ಪಕ್ಷದ ವರಿಷ್ಠರನ್ನು ಓಲೈಸಿಕೊಳ್ಳುವ ರಾಜಕಾರಣ, ಪರ ವಿರೋಧದ ನಿಲುವುಗಳ ನಡುವೆಯೇ ರುದ್ರಗೌಡ,ಶಿವಲಿಂಗ, ಮುದ್ದಪ್ಪ, ಸದಾಶಿವ ಬೆಂಗಳೂರಿಗೆ ಹೋಗುವ ನಿರ್ಧಾರ ಮಾಡುತ್ತಾರೆ. ಸ್ಥಳೀಯ ಪುಡಾರಿಗಳ ಕುಹಕವನ್ನು ಹೇಳಿ ಹೇಗಾದರೂ ಮಾಡಿ ಭ್ರಷ್ಟರಿಗೆ ಟಿಕೀಟು ಸಿಗದಂತೆ ಮಾಡುವುದು ಇದರ ಉದ್ದೇಶ. ಆದರೆ ಈ ಪ್ರಯತ್ನವೂ ಸಫಲವಾಗುವುದಿಲ್ಲ. ಬೆಂಗಳೂರಿನಂತಹ ಮಹಾ ನಗರ ರಾಜಕಾರಣದ ಧೂಳಿನಿಂದ ಹೇಗೆ ಮಲಿನವಾಗಿದೆ?

ಚುನಾವಣೆಯ ಸಮಿತಿ ಸದಸ್ಯರೂ ಹೇಗೆ ಹೊಲಸು ರಾಜಕಾರಣದ ಭಾಗವಾಗಿದ್ದಾರೆ ಎಂಬ ಸತ್ಯ ಅವರಿಗೆ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಹಣ, ಶ್ರೀಮಂತಿಕೆಯ ದರ್ಬಾರಿನಂತೆ ಬೆಂಗಳೂರು ಗೋಚರಿಸುತ್ತದೆ. ಅವರ ಊಹನೆಯಂತೆ ಬಸೆಟ್ಟಿ ಅವನ ಪರಿವಾರಕ್ಕೆ , ಮಲಿಕಪ್ಪ, ಮಾಲಾದೇವಿಯವರಿಗೆ ಟಿಕೀಟು ದೊರೆಯುತ್ತದೆ. ಕಾಮಾಕ್ಷಿಯ ಕೊಲೆ ನಡೆಯುತ್ತದೆ. ಅದರ ಆರೋಪ ಸದಾಶಿವನ ಮೇಲೆ ಬಂದು ಬೀಳುತ್ತದೆ. ನಿರಪರಾಧಿಯಾದ ಸದಾಶಿವನಿಗೆ ಅಪರಾಧ ಸಾಬೀತಾಗಿ ಹತ್ತು ವರ್ಷಗಳ ಕಾಲದ ಜೈಲು ಶಿಕ್ಷೆಯಾಗುತ್ತದೆ. ರುದ್ರಗೌಡ ಕಾಂಗ್ರೆಸ್ಸಿಗೆ ರಾಜೀನಾಮೆ ನೀಡಿ ಸ್ವತಂತ್ರವಾಗಿ ಸ್ಪರ್ಧಿಸುತ್ತಾನೆ. ಬಸೆಟ್ಟಿ ಕಾಂಗ್ರೆಸ್ಸಿನಿಂದ ಸ್ಪರ್ಧಿಸುವಾಗ ಪ್ರಜಾ ಸಮಾಜವಾದಿ ಪಕ್ಷವೂ ತನ್ನ ಉಮೇದುದಾರನನ್ನು ನಿಲ್ಲಿಸಿತು. ಈ ಮೂವರ ನಡುವೆ ಪ್ರಜಾ ಸಮಾಜವಾದಿ ಪ್ರತಿನಿಧಿಗೆ ಕೊನೆಗೆ ಗೆಲುವಾಯಿತು ಎನ್ನುವಲ್ಲಿ ಕಾದಂಬರಿಯು ಮುಕ್ತಾಯವಾಗುತ್ತದೆ. ಅನ್ಯಾಯವನ್ನು ಪ್ರತಿಭಟಿಸಬೇಕು, ರಾಜಕಾರಣಕ್ಕೊಂದು ಪ್ರತಿರಾಜಕಾರಣ ತಂತ್ರ ಹೂಡಬೇಕೆಂಬ ಸದಾಶಿವನಿಗಾದ ಹತಾಶೆ, ಅವನ ಅಸಹಾಯಕತೆ ಕಾದಂಬರಿಯುದ್ದಕ್ಕೂ ಧನಾತ್ಮಕ ರೂಪಕವಾಗಿ ನಿಲ್ಲುತ್ತದೆ. ವ್ಯವಸ್ಥೆಯನ್ನು ಬದಲಿಸಬೇಕಾದವರು ಎಂತಹ ಅಪವಾದವನ್ನೂ ಎದುರಿಸಿ ನಿಲ್ಲಬೇಕಾದುದು ಅನಿವಾರ್ಯವೆಂಬುದು ಇದರಿಂದ ಅರಿವಾಗುತ್ತದೆ. ಸುಳ್ಳು, ಮೋಸ, ವಂಚನೆಗಳನ್ನು ಬಯಲಿಗೆಳೆಯುವ ಎಲ್ಲ ವಿಚಾರವಾದಿಗಳ ಕಥೆಯೂ ಇದೆ ಎನ್ನುವ ವಿಷಾದ ಆವರಿಸುತ್ತದೆ.

ಕಾಂಗ್ರೆಸ್ ರಾಜಕೀಯದಿಂದ ಬಿಡುಗಡೆ ಪಡೆದು ಸ್ವತಂತ್ರ ರೈತ ಕೂಲಿ ಕಾರ್ಮಿಕರ ಪಕ್ಷ ಕಟ್ಟುವ ಕಟ್ಟೀಮನಿಯವರ ಆತ್ಮಕಥನದ ಒಂದು ಭಾಗವೆಂಬಂತೆ ಇಲ್ಲಿಯ ನಾಯಕ ಕಾದಂಬರಿಕಾರರನ್ನು ಹೋಲುತ್ತಾನೆ. ಹಣ, ಹೆಣ್ಣು ಅಧಿಕಾರದಿಂದ ಕೂಡಿದ ಇಂದಿನ ರಾಜಕೀಯ ವ್ಯವಸ್ಥೆಗೆ ಬೆಂಗಳೂರಿಗೊಂದು ಟಿಕೀಟು ನಿಜಕ್ಕೂ ಬೀಸಿದ ಚಾಟಿಯ ಏಟು. ಬಂಡುವಾಳಶಾಹಿ ಮನಸ್ಥಿತಿಯನ್ನು ಪೋಷಿಸುವ, ಅವರಿಗೆ ಮಣೆ ಹಾಕುವ ಸಂಸ್ಕೃತಿಯೊಂದು ಭಾರತವನ್ನು ಈಗಾಗಲೇ ಪ್ರವೇಶಿಸಿದೆ. ಶ್ರೀಮಂತಿಕೆಯ ಬಲ ಮತ್ತು ಶಕ್ತಿಯಿಂದ ಪ್ರಜಾಪ್ರಭುತ್ವದ ಮೌಲ್ಯವನ್ನು ಧಿಕ್ಕರಿಸುವ ಸರ್ವಾಧಿಕಾರಿ ಧೋರಣೆಯೊಂದು ಸದ್ದಿಲ್ಲದೆ ತನ್ನ ಆಕ್ರಮಣಶೀಲತೆಯನ್ನು ಮೆರೆಯುವ ಹೊತ್ತಿಗೆ ಶ್ರೀಸಾಮಾನ್ಯನ ಬದುಕಿನ ಬಗ್ಗೆ ಕಾದಂಬರಿ ಆಳವಾಗಿ ಚಿಂತಿಸುತ್ತದೆ. ಅಧಿಕಾರವು ಸೃಷ್ಟಿಸುತ್ತಿರುವ ಹೊಸ ಕಥನಗಳನ್ನು ನಾವಿದ್ದು ಕೇಳುತ್ತಿದ್ದೇವೆ. ವಿಸ್ವಾಸ ದ್ರೋಹ, ಸ್ವಜನ ಪಕ್ಷಪಾತ, ಜಾತಿ ರಾಜಕಾರಣ, ಧರ್ಮ ಕೋಮು ಭಾವನೆಯ ಉದ್ರಿಕ್ತ ಸ್ಥಿತಿ ಇವೆಲ್ಲವೂ ಒಟ್ಟಾಗಿ ನಮ್ಮ ಸಾಮಾಜಿಕ ಜೀವನದ ಸ್ವಾಸ್ಥ್ಯವನ್ನು ಹದಗೆಡಿಸುತ್ತಿದೆ. ವೃತ್ತಿಯಲ್ಲಿ ವೇಶ್ಯೆಯದರೂ ಮಾನವೀಯತೆ ಅನುಕಂಪ ಪ್ರೀತಿಯಲ್ಲಿ ಸದಾಶಿವನ ಹೆಂಡತಿಯಂತಿರುವ ರಾಧೆಯ ಮೇಲೆ ಪ್ರಭುತ್ವ ರಾಜಕಾರಣವು ತನ್ನ ಕ್ರೌರ್ಯವನ್ನು ಮೆರೆಯುವ ಚಿತ್ರಣ ನೋವುಂಟು ಮಾಡುತ್ತದೆ. ರಾಧೆಯ ಜೊತೆಯಲ್ಲಿರುವ ಸದಾಶಿವನನ್ನು ಪೋಲಿಸ್ ಸೋಮಯ್ಯ ಎಳೆದುಕೊಂಡು ಬಂದು ಒಂದು ರಾತ್ರಿ ಕೂಡಿ ಹಾಕುವ ಸನ್ನಿವೇಶ ನೆನೆದು ಸದಾಶಿವ, ರಾಧೆಗೆ ಅಧಿಕಾರ, ಹಣ ಬಲ ಪ್ರತಿಭಟಿಸುವ ಶಕ್ತಿಯನ್ನು ಜನಸಾಮಾನ್ಯರಿಂದ ಹೇಗೆ ಕಸಿದುಕೊಳ್ಳುತ್ತದೆ ಎಂಬುದಕ್ಕೆ ಇಂತಹ ಕಾರ್ಯಸಾಧನೆಗಳು ನಡೆಯುತ್ತವೆ ಎಂಬ ಅರ್ಥ ಬರುವಂತೆ ವಿವರಣೆ ನೀಡುತ್ತಾನೆ. ಪ್ರತಿಭಟಿಸುವ, ಪ್ರಶ್ನಿಸುವ ಧೋರಣೆಯನ್ನು ಅಧಿಕಾರಶಾಹಿ ಪ್ರಜಾಪ್ರಭುತ್ವದ ತಂತ್ರಗಳು ವ್ಯಕ್ತಿಯನ್ನು ಹತ್ಯೆ ಮಾಡಿ ಹೇಗೆ ವಿಜೃಂಭಿಸುತ್ತದೆ ಎನ್ನುವುದು ಸಮಕಾಲೀನ ಪರಿಸ್ಥಿತಿಯಿಂದ ನಾವು ಇದರ ಮುಂದುವರಿಕೆಯಾಗಿ ಅರ್ಥೈಸಿಕೊಳ್ಳಬೇಕು. ರಾಧೆಯಂತಹ ಮುಗ್ಧ ಹೆಣ್ಣು ಈ ವ್ಯವಸ್ಥೆಯ ಬಲಿ ಪಶುವಾಗಿ ವೇಶ್ಯೆಯಾಗುವ ದುರ್ಗತಿ ನಿಜಕ್ಕೂ ಖೇದಕರ. ವೇಶ್ಯೆ ಗರತಿಯಾಗ ಬಯಸುವ, ಗರತಿ ವೇಶ್ಯೆಯಾಗ ಬಯಸುವ ಎರಡು ವೈರುಧ್ಯದ ಚಿತ್ರಣಗಳನ್ನು ಕಟ್ಟೀಮನಿ ಇಲ್ಲಿ ನೀಡುತ್ತಾರೆ.

ರೈತರು, ಕೂಲಿ ಕಾಮಿಕರ ಪರವಾದ ನಿಲುವುಗಳನ್ನು ಹೆಚ್ಚು ದಿಟ್ಟವಾಗಿ ಪ್ರಕಟಿಸುವ ಕಟ್ಟೀಮನಿಯವರು ಪ್ರಭುತ್ವವು ಹೇಗೆ ರೈತನ್ನು ಹತ್ತಿಕ್ಕಿದೆ ಎನ್ನುವುದನ್ನೂ ವಿವರಿಸುತ್ತಾರೆ. ರಾಜಕಾರಣಿಗಳು ಸುಖಲೋಲುಪತೆಯಲ್ಲಿ ತಮ್ಮನ್ನು ಮರೆತು ತಮ್ಮದೆ ಸ್ವಾರ್ಥ ರಾಜಕಾರಣ ನಡೆಸಿದರೆ ಬಡವರ ಗತಿ ಏನಾಗಬಹುದೆಂಬುದರ ಬಗ್ಗೆಯೂ ಗಮನ ಹರಿಸುತ್ತಾರೆ. ಒಟ್ಟಿನಲ್ಲಿ ಕಾದಂಬರಿಯ ಆಶಯಗಳು ಸಮಕಾಲೀನ ತಲ್ಲಣವನ್ನೂ ಒಳಗು ಮಾಡಿಕೊಂಡು ಚಲಿಸುತ್ತಿರುವುದು ವಿಶೇಷವಾಗಿ ಕಾಣುತ್ತದೆ. ರೈತರು, ಕಾರ್ಮಿಕರು, ಬಡವರ ಸಂಕಟಗಳು ನಮ್ಮ ಪ್ರಭುತ್ವದ ಕೇಂದ್ರಗಳಾಗಬೇಕೇ ವಿನಃ ಅಧಿಕಾರದ ಲಾಲಸೆಗಳಲ್ಲ. ಇಂದಿನ ದ್ವೇಷ ರಾಜಕಾರಣದ ಬದಲು ಬಹುತ್ವವನ್ನು ಬೆಂಬಲಿಸುವ ನಿಲುವುಗಳು ನಮ್ಮ ನಾಯಕರಲ್ಲಿ

ಒಡಮೂಡಬೇಕಾದುದು ಅನಿವಾರ್ಯ. ಪ್ರಜಾಪ್ರಭುತ್ವದ ಆಶಯಗಳು ಗೆಲ್ಲಬೇಕಾದರೆ ನಮ್ಮ ಪ್ರತಿನಿಧಿಗಳು ಯಾರಾಗಬೇಕು ಎಂಬ ತಾತ್ವಿಕ ಜಿಜ್ಞಾಸೆಯನ್ನು, ಸಮಕಾಲೀನ ರಾಜಕೀಯ ಪ್ರಮೇಯವೊಂದನ್ನು ನಮ್ಮ ಮುಂದಿಡುವ ಪ್ರಸ್ತುತ ಕಥನವನ್ನು ಹೆಚ್ಚು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ.

ಗ್ರಂಥ ಋಣ:

೧. ಗತಿ ಪ್ರಜ್ಞೆ: ಪ್ರೊ.ಜಿ.ವೆಂಕಟಸುಬ್ಬಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ(೨೦೦೭)
೨. ಕೆ.ವಿ.ಸುಬ್ಬಣ್ಣ ಅವರ ಆಯ್ದ ಲೇಖನಗಳು: ಕೆ.ವಿ.ಸುಬ್ಬಣ್ಣ, ಅಕ್ಷರ ಪ್ರಕಾಶನ ಹೆಗ್ಗೋಡು (೨೦೦೫)
೩. ಸಾಹಿತ್ಯ ಕಥನ: ಡಿ.ಆರ್.ನಾಗರಾಜ್, ಅಕ್ಷರ ಪ್ರಕಾಶನ ಹೆಗ್ಗೋಡು (೧೯೯೭)
೪. ನಕ್ಷೆ ನಕ್ಷತ್ರ: ಡಾ.ಬಸವರಾಜ ಕಲ್ಗುಡಿ, ಕನ್ನಡ ಮತತು ಸಂಸ್ಕೃತಿ ಇಲಾಖೆ, ಬೆಂಗಳೂರು (೨೦೧೦)